


ಚಿ. ವಸಂತದ ಮದುವೆಯ ದಿನ: ದ.ರಾ. ಬೇಂದ್ರೆ, ಸಾಲಿ ರಾಮಚಂದ್ರರಾಯರು ಹಾಗೂ ಸುಬ್ಬಕ್ಕ.

ಭೂಮಿ ಎಷ್ಟು ಬೇಕು ಅಷ್ಟು ಗಟ್ಟಿಯಿಲ್ಲ.

ಮನೆಯ ಕೆಲಸವು ನಾಳೆ ಪ್ರಾರಂಭವಾಗುವ ಲಕ್ಷಣವಿಲ್ಲ, ಇಟ್ಟಿಗೆಗಳು ಬರಲಾರಂಭಿಸಿರುವುವು. ಮೂಲೆಗಲ್ಲುಗಳು ಇನ್ನೂ ಬಂದಿಲ್ಲ. ಗೋಠೆ ಕೇಶವರಾಯರ ಮಂದತ್ವವು ಕಾರಣವೆಂದು ನನ್ನ ಅಭಿಪ್ರಾಯವು.

ದೇಸಾಯಿ ಗೋವಿಂದರಾಯರಿಗೆ ಇಂದು ಪತ್ರವು ಹೋಯ್ತು. ಸಂಜೀವರಾಯರಿಗೂ ಪಾಂಡುರಂಗ ರಾಯರು ಪತ್ರ ಬರೆದರು.

ಡಿ. ಲೋ. ಬೋರ್ಡಿನ ಸ್ಕೂಲ ಬೋರ್ಡು ನನ್ನ ವ್ಯಾಖ್ಯಾನವನ್ನು ಇಂದು ಏರ್ಪಡಿಸಿದ್ದರು. 3 ಗಂಟೆಗೆ ಹೋಗಿ ವ್ಯಾಖ್ಯಾನವನ್ನು ಹೇಳಿ ಬಂದೆನು.

ಜಯರಾಮಾಚಾರ್ಯ ಗೋಠೆಯವರೊಡನೆ ಇಷ್ಟು ಹೊತ್ತಿನವರೆಗೆ ಬಾವಿ ಮನೆಗಳ ವಿಷಯದಲ್ಲಿ ಮಾತನಾಡಿ ಬಂದೆನು.

**9-11-41 ರಾತ್ರಿ 8.40**

ಮೊನ್ನೆ ಮತ್ತು ನಿನ್ನೆ ರಾತ್ರಿ ಬಲು ದಣಿವು. ಇಂದೂ ದಣಿವು. ಮೈಯಲ್ಲಿ ಕಣಿಕಣಿ. ಕಾಲು ಹರಿಯುತ್ತವೆ. ಸಮಾಧಾನವಿಲ್ಲ.

ಮನೆಯ ಕೆಲಸವು ನಿಂತು ಬಿಟ್ಟಿದೆ. ಗೋಠೆಯವರ ವ್ಯವಸ್ಥೆ-ಹೀನತೆ ಕಾರಣವೊ? ಬಾವಿಯ ಕೆಲಸವು ನಡೆದಿದೆ. ಇಂದು ಮಧ್ಯಾಹ್ನದಿಂದ ಶಿಲೆ ಬರತೊಡಗಿದೆ. ಜಲಶಿಲ್ಪಿ ಜೋಶಿಯವರ ಮಾತು ಸತ್ಯವಾಗುತ್ತಲಿದೆ. ಅಲ್ಪಾವಧಿಯಲ್ಲಿಯೇ ನೀರು ಬರಬಹುದೆಂದು ಮಿತ್ರರ ಅಭಿಪ್ರಾಯವು.

**10-11-41 ರಾತ್ರಿ 8.36**

ಬಾವಿಯ ಕೆಲಸವು ಮುಂದೆ ಸಾಗಿದೆ. ಶಿಲೆ ಅಗಿವವರಿಗೆ ಶ್ರಮ. ಕೆಲಸವು ಬಹಳವಾಗಲು ಶಕ್ಯವಿಲ್ಲ. ಮನೆಯ ಕೆಲಸವು ನಿಂತುಬಿಟ್ಟಿದೆ. ಬಾವಿಯ ನಡುವಿನ ಭಾಗವನ್ನು ಗಚ್ಚಿನಿಂದ ಕಟ್ಟಿಸುವುದು ಅವಶ್ಯವಿಲ್ಲವೆಂದು ತಜ್ಞ ಶ್ರೀ ಪರಾಂಜಪೆಯವರ ಅಭಿಪ್ರಾಯವು. ಯಾವ ಬಗೆಯ ಬಾಧೆಯೂ ಇಲ್ಲ, ವ್ಯರ್ಥ ಭಯವು ಬೇಡವೆನ್ನುವರು.

ಇಂದೂ ದಣಿವು. ವಿಶ್ರಾಂತಿ ಬೇಕು. ಮೈಯಲ್ಲಿ ಕಣಿಕಣಿ. ಹೋಳಿಕಟ್ಟಿ ಕಾಲುಗಳಿಗೆ ಎಣ್ಣೆ ಹೂಸಿ ತಿಕ್ಕಿದನು.

ದುಡ್ಡಿನ ಅಡಚಣಿ. ವೆಚ್ಚಕ್ಕೆ ಸಂಬಳದ ಹಣವು ಸಾಲದು.

**12-11-41 ರಾತ್ರಿ 8.20**

ಇಂದು ಸೌಭಾಗ್ಯವತಿಯ ಶ್ರಾದ್ಧ. ನಾನೇ ಅಡುಗೆಯನ್ನು ಮಾಡಿದೆನು. ಸುಬ್ಬವ್ವ ಹೋಳಿಗೆಗಳನ್ನು